**ದಿನಾಂಕ: 10-08-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲು: 1 & 3 ನೇ ಪ್ರತಿವಾದಿಯರ ಪರ ಶ್ರೀ.ಎಸ್.ಟಿ.ಎಸ್. ವಕೀಲರಿಂದ:-**

ಪ್ರತಿವಾದಿ ನಂ.1 ರವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರವರಿಗೆ ಒಂದು ಗಂಡು ಮಗ, 2 ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಗನ ಹೆಸರು ಮನೋಜ ಇರುತ್ತದೆ. ಹೆಣ್ಣು ಮಕ್ಕಳು ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರವರಿಗೆ ಒಬ್ಬ ಗಂಡು ಮಗ ಮತ್ತು ಒಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಗನ ಹೆಸರು ಸಂಜಯ ಅಂತಾ ಇದ್ದು, ಹೆಣ್ಣು ಮಗಳ ಹೆಸರು ನನಗೆ ಗೊತ್ತಿಲ್ಲ.

ಮಾರುತಿ ತಂದೆ ಪೀರಪ್ಪ ಲಾಡೆ ಇವರ ಮೊದಲ ಹೆಂಡತಿ ಹೆಸರು ನಾಗವ್ವ ಎಂದರೆ ಸರಿ. ಸದರಿ ನಾಗವ್ವ ಇವರಿಗೆ 1 & 2 ನೇ ಪ್ರತಿವಾದಿಯರು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಗ ಎಂದರೆ ಸರಿ. ಸದರಿ ಮಾರುತಿ ಇವರಿಗೆ ಇನ್ನೊಬ್ಬಳು 2 ನೇ ಹೆಂಡತಿ ಸುಭದ್ರಾಬಾಯಿ ಅಂತಾ ಇರುತ್ತಾಳೆ ಎಂದರೆ ಸರಿ. ಸುಭದ್ರಾಬಾಯಿ ಇವರಿಗೆ ಒಬ್ಬ ಭೀಮಶ್ಯಾ ಅಂತಾ ಒಬ್ಬ ಮಗ ಇದ್ದ ಆತನು ಮದುವೆ ಇಲ್ಲದೆ ಸದರಿ ಸುಭದ್ರಾಬಾಯಿ ಯವರ ಮುಂಚೆ ಮರಣ ಹೊಂದಿರುತ್ತಾನೆ ಎಂದರೆ ಸರಿ. ಮಾರುತಿ ಇವರ ಮೊದಲ ಹೆಂಡತಿ ನಾಗವ್ವ ಹಾಗೂ 2 ನೇ ಹೆಂಡತಿ ಸುಭದ್ರಾಬಾಯಿ ಅಂತಾ ಇದ್ದು, ಅವರು ಇಬ್ಬರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಾಯಿ ಸದರಿ ಮಾರುತಿಗೆ 3 ನೇ ಹೆಂಡತಿ ಇರುತ್ತಾಳೆ ಎಂದು ನುಡಿಯುತ್ತಾರೆ.

3 ನೇ ಹೆಂಡತಿಯ ಹೆಸರು ಮಹಾದೇವಿ ಇದ್ದು, ಸದರಿ ಮಹಾದೇವಿ ರವರ ತಂದೆ-ತಾಯಿಯ ಹೆಸರು ನನಗೆ ಗೊತ್ತಿಲ್ಲ. ಸದರಿ ಮಹಾದೇವಿ ಇವಳು ಮಾರುತಿ ರವರ 3 ನೇ ಹೆಂಡತಿ ಇರುತ್ತಾಳೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಸದರಿ ಮಹಾದೇವಿಯ ಮಗ ಮನೋಹರ ಇರುತ್ತಾನೆ ಅಂತಾ ತೋರಿಸಲು ಆತನ ಚುನಾವಣೆ ಗುರುತಿನ ಪತ್ರ, ರೇಷನ ಕಾರ್ಡ ಮತ್ತು ಶಾಲಾ ದಾಖಲಾತಿ ಅಥವಾ ಜನನ ಪ್ರಮಾಣ ಪತ್ರವನ್ನು ನಾನು

ಹಾಜರುಪಡಿಸಿರುವುದಿಲ್ಲ. ಸದರಿ ಮನೋಹರ ಇತನು ಮಹಾದೇವಿಯ ಮಗ ಇರುತ್ತಾನೆ ಮತ್ತು ಆತನು ಬಗದೂರಿ ಗ್ರಾಮದವನು ಇರುತ್ತಾನೆ ಅಂತಾ ತೋರಿಸಲು ನಾನು ಯಾವುದೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮಾರುತಿ ಹಾಗೂ ಮಹಾದೇವಿಯ ಮಗ ಮನೋಹರ ಅಂತಾ ಯಾರು ಬಗದೂರಿ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು & 2 ನೇ ವಾದಿಯು 1 ರಿಂದ 3 ನೇ ಪ್ರತಿವಾದಿಯರ ಕುಟುಂಬಕ್ಕೆ ಮತ್ತು ಅವರ ಆಸ್ತಿಗೆ ಯಾವುದೆ ರೀತಿ ಸಂಬಂಧ ಇರುವುದಿಲ್ಲ, ಆದರೆ ಅವರ ವಿರುದ್ಧ ನಾವು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂ.56/6 ಕ್ಷೇತ್ರ 14 ಗುಂಟೆ, 59/2 ಕ್ಷೇತ್ರ 1 ಎಕರೆ 11 ಗುಂಟೆ, ಹಾಗೂ ಸರ್ವೇ ನಂ.62/5 ಕ್ಷೆತ್ರ 26 ಗುಂಟೆ ಒಟ್ಟು 2 ಎಕರೆ 27 ಗುಂಟೆ ಜಮೀನಿನ ಮಾಲೀಕ & ಕಬ್ಜೆದಾರರು ಮೊದಲಿಗೆ ಮಾರುತಿ ತಂದೆ ಪೀರಪ್ಪ ಲಾಡೆ ಅವರು ಇದ್ದರು ಎಂದರೆ ಸರಿ. ಮಾರುತಿ ಲಾಡೆ ಇವರು 1990 ಕ್ಕಿಂತ ಮುಂಚೆ ಮರಣ ಹೊಂದಿರುತ್ತಾರೆ. ಸದರಿ ಮಾರುತಿ ರವರ ಮರಣಾ ನಂತರ ದಾವಾ ಆಸ್ತಿಗಳು ಮಾರುತಿ ರವರ ಮೊದಲನೆ ಪತ್ನಿ ನಾಗಮ್ಮ ಇವರ ಹೆಸರಿಗೆ ವರ್ಗಾವಣೆ ಆಗಿರುತ್ತವೆ ಎಂದರೆ ಸರಿ. ಸದರಿ ನಾಗವ್ವ ಹಾಗೂ ಮಾರುತಿ ರವರ 2 ನೇ ಹೆಂಡತಿ ಸುಭದ್ರಾರವರು ಸೇರಿ ದಾವಾ ಆಸ್ತಿಗಳನ್ನು ನಾಗವ್ವ ಇವರ ಹೆಸರಿಗೆ ಮಾಡಲು ತಹಶೀಲ್ದಾರ ಕಛೇರಿಗೆ ಅರ್ಜಿ ಸಲ್ಲಿಸಿದ ಮೇರೆಗೆ ದಾವಾ ಆಸ್ತಿಗಳು ನಾಗವ್ವ ಇವರ ಹೆಸರಿಗೆ ದಾಖಲು ಆಗಿರುತ್ತವೆ ಎಂದರೆ ಸರಿ.

ಸದರಿ ನಾಗವ್ವ ಇವರ ಹೆಸರು ದಾವಾ ಆಸ್ತಿಗೆಳಿಗೆ ಹಕ್ಕು ಬದಲಾವಣೆ ಆದ ಬಗ್ಗೆ 1991 ರಿಂದ ಹಿಡಿದು 2017 ರವರೆಗೆ ಸದರಿ ಹಕ್ಕು ಬದಲಾವಣೆ ಮತ್ತು ಪಹಣಿ ಪತ್ರಿಕೆಗಳಲ್ಲಿ ಹೆಸರು ದಾಖಲಾದ ಬಗ್ಗೆ ತಕರಾರನ್ನು ಸಂಬಂಧ ಪಟ್ಟ ತಹಶೀಲ್ದಾರ ಕಛೇರಿಗೆ ಸಲ್ಲಿಸಿರುವುದಿಲ್ಲ. ಸದರಿ ನಾಗವ್ವ ರವರು 2017 ರಲ್ಲಿ ತಮ್ಮ ಪ್ರೀತಿ ವಾತ್ಸಲ್ಯದಿಂದ ದಾವಾ ಜಮೀನು ಸರ್ವೇ ನಂ.56/6 ಕ್ಷೇತ್ರ 14 ಗುಂಟೆ, 59/2 ಕ್ಷೇತ್ರ 1 ಎಕರೆ 11 ಗುಂಟೆ ಹಾಗೂ ಜಮೀನು ಸರ್ವೇ ನಂ.62/5 ಕ್ಷೇತ್ರ 26 ಗುಂಟೆ ಜಮೀನುಗಳನ್ನು ಪ್ರತಿವಾದಿ ನಂ.3 ರವರಿಗೆ ದಾನ ಪತ್ರ ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಮೇರೆಗೆ ಸದರಿ ಜಮೀನುಗಳ ಪಹಣಿ ಪತ್ರಿಕೆಯಲ್ಲಿ ಹಾಗೂ ಹಕ್ಕು ಬದಲಾವಣೆ 3 ನೇ ಪ್ರತಿವಾದಿ

ಹೆಸರಿಗೆ ಆಗಿರುತ್ತದೆ ಎಂದರೆ ಸಾಕ್ಷಿಯು ಅವರ ಹೆಸರಿಗೆ ಆಗಿರುತ್ತದೆ, ಆದರೆ ಯಾರಿಗೂ ಹೇಳದೆ ಕೇಳದೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

2017 ರಿಂದ ಇಲ್ಲಿಯವರೆಗೆ 3 ನೇ ಪ್ರತಿವಾದಿಯು ಸದರಿ ಜಮೀನುಗಳ ಮಾಲೀಕ & ಕಬ್ಜೆದಾರನು ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ 1 & 2 ನೇ ಪ್ರತಿವಾದಿ ಹಾಗೂ ನಾವು ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮಾರುತಿ ಲಾಡೆ ರವರು ಸರ್ಕಾರಿ ನೌಕರರು ಇದ್ದರು ಎಂದರೆ ಸರಿ. ಸದರಿ ಮಾರುತಿ ರವರು ನಾಸಿಕನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಮುಂಬೈನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಜಮೀನುಗಳ ಚೆಕ್ ಬಂದಿ ನನಗೆ ಹೇಳಲು ಬರುತ್ತದೆ. ದಾವಾ ಜಮೀನು ಸರ್ವೇ ನಂ.56/6 ರ ಪೂರ್ವಕ್ಕೆ ಸರ್ವೇ ನಂ.59 ರ ಜಮೀನು, ಪಶ್ಚಿಮಕ್ಕೆ, ದಕ್ಷಿಣಕ್ಕೆ ಹಾಗೂ ಉತ್ತರಕ್ಕೆ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ.

ದಾವಾ ಜಮೀನು ಸರ್ವೇ ನಂ.59/2 ನೇದ್ದರ ಪೂರ್ವಕ್ಕೆ ಗುಡ್ಡ ಇರುತ್ತದೆ, ಪಶ್ಚಿಮಕ್ಕೆ ಜಮೀನುಗಳಿದ್ದು, ಯಾರ ಜಮೀನುಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ, ಉತ್ತರಕ್ಕೆ ಗುಡ್ಡ ಇರುತ್ತದೆ, ದಕ್ಷಿಣಕ್ಕೆ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನು ಸರ್ವೇ ನಂ.62/5 ನೇದ್ದರ ಪೂರ್ವಕ್ಕೆ ಗುಡ್ಡ, ಪಶ್ಚಿಮಕ್ಕೆ, ದಕ್ಷಿಣ ಮತ್ತು ಉತ್ತರಕ್ಕೆ ಜಮೀನುಗಳಿದ್ದು, ಆದರೆ ಯಾರ ಜಮೀನುಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನು ಸರ್ವೇ ನಂ.62/7 ರ ಜಮೀನಿನ ಪೂರ್ವಕ್ಕೆ ಗುಡ್ಡಇದ್ದು, ಪಶ್ಚಿಮಕ್ಕೆ, ದಕ್ಷಿಣ ಮತ್ತು ಉತ್ತರಕ್ಕೆ ಜಮೀನುಗಳಿದ್ದು, ಆದರೆ ಯಾರ ಜಮೀನುಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಜಮೀನುಗಳನ್ನು ಯಾವಾಗಲೂ ನೋಡಿರುವುದಿಲ್ಲ ಎಂದರೆ ಸರಿ.

ಮಾರುತಿಯ ತಂದೆಗೆ ಯಾವರೀತಿ ಜಮೀನುಗಳು ಬಂದಿರುತ್ತವೆ ಎಂದು ತೋರಿಸಲು ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ.23 ರ ಪಹಣಿ ಪತ್ರಿಕೆಯಲ್ಲಿ ನಮೂದಿಸಲಾದ ಶಿವದಾಸ ತಂದೆ ಕಾಶಿನಾಥ ಹಾಗೂ ಲಕ್ಷ್ಮಣ ತಂದೆ ತುಕ್ಕಪ್ಪ ಇವರು ಯಾರು ಎಂಬುದು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನಗೆ ಜಮೀನು ಬೇಕು ಅಂತಾ ಬರೆಯಲಾಗಿರುತ್ತದೆ. ಪ್ರತಿವಾದಿ ನಂ.1 & 2 ರವರು ನನ್ನ

ಸಹೋದರರು ಇರುತ್ತಾರೆ ಅಂತಾ ತೋರಿಸಲು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರಬಹುದು ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ 1 & 2 ರವರು ನನ್ನ ಮಲ ಸಹೋದರರು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ವಕೀಲರು ಹಾಜರುಪಡಿಸಿರಬಹುದು ಎಂದು ನುಡಿಯುತ್ತಾರೆ.

ದಾವಾ ಆಸ್ತಿಗೂ & ಪ್ರತಿವಾದಿಯರಿಗೆ ನಾವು ಯಾವುದೆ ರೀತಿ ಸಂಬಂಧ ಇರದಿದ್ದರು ಸಹಿತ ಪ್ರತಿವಾದಿಯರ ವಿರುದ್ಧ ಅವರಿಗೆ ಆಗದವರ ಮಾತು ಕೇಳಿ ಸುಳ್ಳು ದಾವಾ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ.2 & ಅವರ ಪರ ವಕೀಲರು ಗೈರು ಹಾಜರಿದ್ದು, ದಾವೆಗೆ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪ್ರತಿವಾದಿ ನಂ.2 ರವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**(ಮರು ವಿಚಾರಣೆ ಇರುವುದಿಲ್ಲ.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)**

**ದಿವಾಣಿ ನ್ಯಾಯಾಧೀಶರು**
**ಬಸವಕಲ್ಯಾಣ.**

**ಸಾಕ್ಷಿದಾರರ ಸಹಿ:-**